ಅಧ್ಯಕ್ಷರು : ಮಾನ್ಯ ವೆಂಕಟಸ್ವಾಮಿಯವರು ಇಲ್ಲ, ರಾಮಸ್ವಾಮಿಗೌಡ ಬಿ.ಬಿ. ಇಲ್ಲ, ವಿ. ಮುನಿಯಪ್ಪನವರು ಇಲ್ಲ. ಮಾನ್ಯ ಎಂ. ಸತ್ಯನಾರಾಯಣ ರವರು ಮಾತನಾಡಿ.

ಮೈಸೂರಿನ ಬೆಳವಾಡಿಯಲ್ಲಿ ಸರ್ಕಾರಿ ಐ.ಟಿ.ಐ ತರಬೇತಿ ಕೇಂದ್ರ ಸ್ಥಾಪನೆ

60 (14) ಶ್ರೀ ಸತ್ಯನಾರಾಯಣ ಎಂ. (ಚಾಮುಂಡೇಶ್ವರಿ) : ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ತಾಲ್ಲೂಕು ಬೆಳವಾಡಿ ಗ್ರಾಮದಲ್ಲಿ ಸರ್ಕಾರಿ ಐಟಿಐ ತರಬೇತಿ ಸಂಸ್ಥೆಯು ಆರಂಭಗೊಂಡು 12–13 ವರ್ಷಗಳೇ ಕಳೆದಿದ್ದು, ಈ ಕಾಲೇಜು ಖಾಸಗಿ ಕಟ್ಟಡದಲ್ಲಿ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಸದರಿ ಕಾಲೇಜು ಕಟ್ಟಡ ನಿರ್ಮಾಣಕ್ಕೆ ಅನುಮೋದನೆ ಹಾಗೂ ಅನುದಾನವನ್ನು ನೀಡಲಾಗಿದೆಯೇ;

ಇ) ಹಾಗಿದ್ದಲ್ಲಿ, ಎಷ್ಟು ಮೊತ್ತಕ್ಕೆ ಅನುಮೋದನೆ ನೀಡಲಾಗಿದೆ ಹಾಗೂ ಕಟ್ಟಡ ನಿರ್ಮಾಣ ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಗುವುದು; ಮಾಹಿತಿಯನ್ನು ಒದಗಿಸುವುದು?

ಶ್ರೀ ಬಿ. ಎನ್. ಬಚ್ಚೇಗೌಡ (ಕಾರ್ಮಿಕ ಸಚಿವರು) :

ಅ) ಹೌದು.

ಆ) ಇಲ್ಲ.

ಇ) ಆರ್.ಐ.ಡಿ.ಎಫ್. – ನಬಾರ್ಡ್ ಯೋಜನೆ ಅಡಿಯಲ್ಲಿ ಕಟ್ಟಡ ನಿರ್ಮಿಸಲು ಉದ್ದೇಶಿಸಲಾಗಿದೆ. ಇದಕ್ಕಾಗಿ ನಬಾರ್ಡ್‌ಗೆ ಪ್ರಸ್ತಾವನೆಯನ್ನು ಕಳುಹಿಸಲಾಗುವುದು.

ಶ್ರೀ ಎಂ. ಸತ್ಯನಾರಾಯಣ : ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಉತ್ತರವನ್ನು ಕೊಟ್ಟಿದ್ದಾರೆ. ಈ ಒಂದು institute ಶುರು ಆಗಿ 13 ವರ್ಷವಾಗಿದೆ. ಮೈಸೂರು ಗ್ರಾಮಾಂತರ ಅಂಥ ಹೇಳಿ ಶುರು ಮಾಡಿದ್ದಾರೆ. ಆದರೆ ಮೈಸೂರು ನಗರದಲ್ಲಿ ಆ institute ನಡೆಯುತ್ತಿದೆ. ಆ institute ನ ಅನುಕೂಲವನ್ನು ಗ್ರಾಮಾಂತರದವರು ಪಡೆಯುವುದಕ್ಕೆ ಅನುಕೂಲವಾಗುತ್ತಿಲ್ಲ. ಅದಕ್ಕಾಗಿ ಈಗ open ಮಾಡಿರುವ ಕಡೆಗೂ, ಈಗ ಜಗ ತೆಗೆದುಕೊಂಡಿರುವ

ಕಡೆಗೂ ಸುಮಾರು 8–10 ಕಿ.ಮೀ. ಅಂತರವಿದೆ. ಇದರಿಂದ ಗ್ರಾಮಾಂತರದ ಮಕ್ಕಳಿಗೆ ಅನಾನುಕೂಲವಾಗುತ್ತಿದೆ. ಆ ದೃಷ್ಟಿಯಿಂದ ಈ ಕೂಡಲೇ ಕಟ್ಟಡದ ಕಾಮಗಾರಿಗೆ ತಾವು ಶೀಘ್ರವಾಗಿ ತೆಗೆದುಕೊಳ್ಳಬೇಕು. ಸಿಟಿಯೊಳಗೆ ಇರುವ ಜಾಗವನ್ನು ಬಿಟ್ಟು ಯಾವುದಾದರೊಂದು ಬೆಳವಾಡಿ industrial area ದಲ್ಲಿಯೆ ನಿಂತು ಹೋಗಿರತಕ್ಕಂಥ ಒಂದು unit ನ್ನು ತೆಗೆದುಕೊಂಡು ಅಲ್ಲಿ ಪ್ರಾರಂಭ ಮಾಡುವುದು ಉತ್ತಮ. ಗ್ರಾಮಾಂತರ ಪ್ರದೇಶದ ಮಕ್ಕಳಿಗೆ ಅನುಕೂಲವಾಗುವಂತೆ ಮಾಡಬೇಕು. ಅಲ್ಲಿ ಕಟ್ಟಡ ಆಗುವುದಕ್ಕೆ ಇನ್ನು ಬಹಳ ನಿಧಾನವಾಗುತ್ತದೆ. ಸಿಟಿಯಲ್ಲಿರುವ instituteನ್ನು ತಂದು ಗ್ರಾಮಾಂತರ ಪ್ರದೇಶದಲ್ಲಿ ಹಾಕುವುದು ಉತ್ತಮ ಎನ್ನುವುದನ್ನು ತಿಳಿಸುತ್ತಾ ತಾವು ಈಗಾಗಲೇ ಅಲ್ಲಿ ಮೂರು subject ಗಳನ್ನು ಮಾತ್ರ ಮಾಡುತ್ತಿದ್ದೀರಿ. ಸಿಟಿಯೊಳಗೆ ನಡೆಯುತ್ತಿರುವಂಥ ಬೇರೆ ಹಳೆಯ instituteನಲ್ಲಿ 16 subject ಗಳು ನಡೆಯುತ್ತಿದೆ. ಆದರೆ ಇಲ್ಲಿ ಬರಿ ಮೂರು subject ಗಳು ನಡೆಯುತ್ತಿರುವುದರಿಂದ ಅನಾನುಕೂಲವಾಗುತ್ತದೆ. ಆದ್ದರಿಂದ ದಯವಿಟ್ಟು ತಾವು ಇಲ್ಲಿ 8 subjectಗಳನ್ನು ತೆರೆಯುವ ರೀತಿ ಮಾಡಿ ನಿಂತುಹೋಗಿರುವಂಥ ಒಂದು unitನ್ನು ಬಾಡಿಗೆಗೆ ತೆಗೆದುಕೊಂಡು ಬೆಳವಾಡಿ industrial area ದಲ್ಲಿಯೆ ನೀವು ಮಾಡಿದರೆ ಹಳ್ಳಿಗಾಡಿನ ಮಕ್ಕಳಿಗೆ ಅನುಕೂಲವಾಗುತ್ತದೆನ್ನುವುದನ್ನು ತಮಗೆ ತಿಳಿಸುತ್ತಾ ಇದನ್ನು ತಾವು ಕಾರ್ಯಗತ ಮಾಡಿಕೊಡಬೇಕೆಂದು ತಮ್ಮ ಮೂಲಕ ಒತ್ತಾಯ ಮಾಡುತ್ತೇನೆ.

ಶ್ರೀ ಬಿ.ಎನ್.ಬಚ್ಚೇಗೌಡ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಇದರ ಬಗ್ಗೆ ಈಗಾಗಲೇ ನನ್ನ ಹತ್ತಿರ ಚರ್ಚೆ ಮಾಡಿರುತ್ತಾರೆ. ಇವತ್ತು ಆ ಪ್ರಶ್ನೆಯ ಬಗ್ಗೆ ಇವತ್ತಿನ ಸದನದಲ್ಲಿ ತಂದಿದ್ದಾರೆ. ಸುಮಾರು 10–12 ವರ್ಷಗಳ ಹಿಂದೆ 8 ಎಕರೆ ಜಮೀನು ಕೊಟ್ಟು ಆ ಜಮೀನಿಗೆ 18 ಲಕ್ಷ ರೂ.ಗಳ compound ಸಹ ಹಾಕಿದೆ. ಅದು ತಮಗೆ ಗೊತ್ತಿದೆ. ಕಟ್ಟಡವನ್ನು ಕಟ್ಟುವ ದೃಷ್ಟಿಯಿಂದ ನಕ್ಷೆ ಸಿದ್ಧಪಡಿಸಿ, 425 ಲಕ್ಷ ರೂ.ಗಳಾಗಿದೆ. ಕಳೆದ ವರ್ಷ ನಾವು ನಬಾರ್ಡ್ 15ರಲ್ಲಿ ತೆಗೆದುಕೊಂಡು 3 ಕೋಟಿ ರೂ.ಗಳಿಗೆ ಒಂದರಂತೆ ನಬಾರ್ಡ್‌ದಲ್ಲಿ ತೆಗೆದುಕೊಂಡಿದ್ದೇವೆ. ಹಾಗೆಯೇ ಈ ಸಲ 2010–11ನೇ ಸಾಲಿನಲ್ಲಿ ಮತ್ತೆ ನಬಾರ್ಡ್‌ನಲ್ಲಿ ಇದನ್ನು ಸೇರಿಸಿದ್ದೇವೆ. ತಾವು ಹೇಳಿದ್ದೀರಿ ಕಟ್ಟಡವನ್ನು ಕಟ್ಟಿ ಕೊಡುವುದು ಒಂದು. ತಾವು ಅವಶ್ಯಕತೆ

ಇರುವ ಟ್ರೇಡ್ಸ್‌ಗಳನ್ನು ಜಾಸ್ತಿ ಮಾಡಿ ಕೊಡಿ ಎಂದು ಹೇಳುತ್ತಿದ್ದೀರಿ, ಆ ವೃತ್ತಿಗಳನ್ನು ಕೊಡುವಂಥ ಕೆಲಸಗಳನ್ನು ಈಗ ಮಾಡುತ್ತೇವೆ. ನೀವು ಕೈಗಾರಿಕೆಯ ಪ್ರದೇಶದಲ್ಲಿಯೆ ಮಾಡಿ ಎಂದರೆ ನಾವು ನೀವು ನೇರವಾಗಿ ಚರ್ಚೆ ಮಾಡಿ. ಕೈಗಾರಿಕಾ ಪ್ರದೇಶದಲ್ಲಿ ಪ್ರತ್ಯೇಕ ಜಮೀನು ಇದ್ದು ಅವಶ್ಯಕತೆ ಇರುವಷ್ಟನ್ನು ನಾವು ತೆಗೆದುಕೊಂಡು ಏನು ಬೇಕು ನೀವು ಬನ್ನಿ, ನಮ್ಮ ಕಛೇರಿಯಲ್ಲಿ ಕುಳಿತುಕೊಂಡು ಮಾಡೋಣ. ಇದು ಬೇಡ ಎನ್ನುವುದರಿಂದ ಏನು ಎನ್ನುವ ಪ್ರಶ್ನೆ ಆ ರೀತಿ ಅದು ಆಗುತ್ತದೆ. ಬೆಳವಾಡಿಯಲ್ಲಿಯೆ ಮಾಡಿ ಎಂದರೆ ಅಲ್ಲಿ ಯಾವ ರೀತಿ ಆಗಬೇಕು ಎನ್ನುವ ಪ್ರಶ್ನೆ ಬರುತ್ತದೆ. ಇಲ್ಲಿ ಬೇಡ ಎನ್ನುವುದರ ಬಗ್ಗೆಯೂ ತಾವೇ ವಿಷಯವನ್ನು ತಿಳಿಸಬೇಕಾಗುತ್ತದೆ. ಅದರ ಬಗ್ಗೆ ಮಾತನಾಡೋಣ.

ಶ್ರೀ ಎಂ. ಸತ್ಯನಾರಾಯಣ : ಮಾನ್ಯ ಅಧ್ಯಕ್ಷರೆ, ಈಗ ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿರುವಂಥ institute ಅದು ಸಿಟಿಯಲ್ಲಿದೆ. ಆದ್ದರಿಂದ industrial area ದಲ್ಲಿಯೇ ಯಾವುದಾದರೊಂದು ನಿಂತು ಹೋಗಿರುವ unit ನ್ನು ಬಾಡಿಗೆಗೆ ತೆಗೆದುಕೊಂಡು ಅಲ್ಲಿ start ಮಾಡಿದರೆ ಹಳ್ಳಿಗಾಡಿನ ಮಕ್ಕಳಿಗೆ ಅನುಕೂಲವಾಗುತ್ತದೆ.

ಶ್ರೀ ಬಿ.ಎನ್. ಬಚ್ಚೇಗೌಡ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರ ಸಲಹೆ ಸರಿಯಾಗಿದೆ. ನಾನು ಅದರ ಬಗ್ಗೆ ಮಾತನಾಡಿ ಕೈಗಾರಿಕೆ ಪ್ರದೇಶದಲ್ಲಿಯೆ ಸಿಕ್ಕರೆ ನಮಗೆ ಬಾಡಿಗೆ ಉಳಿಯುತ್ತದೆ. ಅಲ್ಲಿಗೆ ಬದಲಾಯಿಸಿ ಏನು ಕೆಲಸ ಬೇಕು ಅದನ್ನು ಮಾಡಿ ಕೊಡುತ್ತೇವೆ. ತಮ್ಮ ಅಪೇಕ್ಷೆ ಪ್ರಕಾರ 2010–11ರ ಯೋಜನೆಯಲ್ಲಿ ಸೇರಿಸಿ ನಮಗೆ ಒಳ್ಳೆಯ ಪ್ರದೇಶ ಕೊಟ್ಟಿದ್ದೀರಿ, ಇದಕ್ಕೆ 3 ಅಥವಾ 5 ಕೋಟಿ ರೂ.ಗಳಾಗುತ್ತದೆ, ಅದನ್ನು ಸೇರಿಸಿ ಕೊಡುವಂಥ ಕೆಲಸವನ್ನು ಮಾಡುತ್ತೇನೆ.

ಶ್ರೀ ವೈ.ಎನ್. ರುದ್ರೇಶಗೌಡ : ಬೇಲೂರಿನಲ್ಲಿ ITI College ಶುರು ಆಗಿ 5 ವರ್ಷವಾಗಿದೆ. ಲ್ಯಾಂಡ್ ಕೊಟ್ಟು ಎರಡು ವರ್ಷವಾಗಿದೆ. 5 ಎಕರೆ ಜಮೀನು ಕೊಟ್ಟರೆ ಹೊಸ ಕಟ್ಟಡದ ಕಾಮಗಾರಿ ಇನ್ನೂ ಶುರು ಆಗಿಲ್ಲ. ಅದಕ್ಕೆ ಗ್ರಾಂಟ್ ಕೊಟ್ಟಿಲ್ಲ. ಆದ್ದರಿಂದ ತಕ್ಷಣಕ್ಕೆ ತಾವು ಹೊಸ ಕಟ್ಟಡಕ್ಕೆ ಹಣವನ್ನು ನಿಗದಿ ಮಾಡಿ ಬೇಲೂರು ITI College ಗೆ ಕೊಡಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಬಿ.ಎನ್. ಬಚ್ಚೇಗೌಡ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಕೇಳಿರುವಂಥದ್ದು 158 ಸರ್ಕಾರಿ ITI ಗಳು ನಮ್ಮ ರಾಜ್ಯದಲ್ಲಿವೆ. ಅದರಲ್ಲಿ 51 ಸಂಸ್ಥೆಗಳಿಗೆ ಸ್ವಂತ ಕಟ್ಟಡಗಳು ಇವೆ. 37 ಸಂಸ್ಥೆಗಳಿಗೆ ಕಟ್ಟಡಗಳನ್ನು ನಿರ್ಮಾಣ ಮಾಡುತ್ತಿದ್ದೇವೆ. ಸುಮಾರು 70 ಸಂಸ್ಥೆಗಳು ಖಾಸಗಿ ಕಟ್ಟಡದಲ್ಲಿ ನಡೆಯುತ್ತಿವೆ. ಈ ವರ್ಷ ಮತ್ತೆ 30–35 institute ಗಳನ್ನು ಹೊಸದಾಗಿ ತೆಗೆದುಕೊಳ್ಳಬೇಕೆಂದು ಇದ್ದೇವೆ. ಅದರಲ್ಲಿ ಆದ್ಯತೆ ಮೇಲೆ ಯಾರು ಜಮೀನು ಕೊಟ್ಟಿದ್ದಾರೆ, ಎಲ್ಲಿ ಅವಶ್ಯಕತೆ ಇದೆ ಅಲ್ಲಿ ತೆಗೆದುಕೊಳ್ಳಬೇಕೆಂದು ಮಾಡಿರುತ್ತೇವೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ : ಮಾನ್ಯ ಅಧ್ಯಕ್ಷರೆ, ನಾವು ಜಮೀನು ಕೊಟ್ಟಾಗಿದೆ. ಟೆಂಡರ್ ಕೂಡ ಕರೆದಾಗಿದೆ, ಗುತ್ತಿಗೆದಾರರು ಗೊತ್ತಾಗಿದ್ದಾರೆ. ನಿಮ್ಮ administration approval ಇಲ್ಲದೆ ಕಾಯುತ್ತ ಇದ್ದಾರೆ.

ಶ್ರೀ ಬಿ.ಎನ್. ಬಚ್ಚೇಗೌಡ : ಮಾನ್ಯ ಅಧ್ಯಕ್ಷರೆ, ಮಾನ್ಯ ಶಿವಲಿಂಗೇಗೌಡರು ಈ ಪ್ರಶ್ನೆಯನ್ನು ಮೊದಲೇ ಪ್ರಸ್ತಾಪ ಮಾಡಿದ್ದಾರೆ. ಆದರೆ ಇಲ್ಲಿ ಆ ಪ್ರಶ್ನೆ ಎತ್ತಿಲ್ಲ. ಅವರು ನನ್ನ ಕಛೇರಿಯಲ್ಲಿ ಮಾತನಾಡಿದಾಗ ಅದಕ್ಕೆ ಏನು ಬೇಕು ಸೂಕ್ತ ಕ್ರಮ ನಾನು ಮಾಡುತ್ತೇನೆ.

ರಾಜ್ಯದ ನೆಮ್ಮದಿ ಕೇಂದ್ರಗಳ ಕುರಿತು

5 (36) : ಶ್ರೀ ಅಪ್ಪಚ್ಚು ರಂಜನ್ ಎಂ.ಪಿ (ಮಡಿಕೇರಿ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯಾದ್ಯಂತ ನೆಮ್ಮದಿ ಕೇಂದ್ರದ ಮೇಲ್ವಿಚಾರಣೆಯನ್ನು ಯಾರಿಗೆ ವಹಿಸಿಕೊಡಲಾಗಿದೆ;

ಆ) ನೆಮ್ಮದಿ ಕೇಂದ್ರದಿಂದ ಸಾರ್ವಜನಿಕರಿಗೆ ತುಂಬಾ ತೊಂದರೆ ಯಾಗುತ್ತಿದ್ದು, ಈ ಬಗ್ಗೆ ಕಂಪನಿಯವರು ವ್ಯವಹರಿಸದೆ ಇರುವುದರ ಬಗ್ಗೆ ಸರ್ಕಾರ ಯಾವ ಕ್ರಮಕೈಗೊಳ್ಳಲಾಗಿದೆ?

ಶ್ರೀ ಬಿ.ಎಸ್. ಯಡಿಯೂರಪ್ಪ (ಮುಖ್ಯಮಂತ್ರಿಗಳು) :

ಅ) ನೆಮ್ಮದಿ ಯೋಜನೆಯ ದೈನಂದಿನ ಮೇಲ್ವಿಚಾರಣೆಯನ್ನು ಜಿಲ್ಲಾಧಿಕಾರಿಗಳಿಗೆ ವಹಿಸಲಾಗಿದೆ.

ಆ) ಅನುಬಂಧದಲ್ಲಿ ವಿವರಗಳನ್ನು ನೀಡಲಾಗಿದೆ.